**O.S .No. 102/2021 -- PW -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:01-08-2024**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಎನ್. ವಕೀಲರಿಂದ**

ನಾನು ಬಿ.ಎ. ಪದವಿಧರನಾಗಿರುತ್ತೇನೆ. ನಾನು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ನಾವು 3 ಜನ ಮಕ್ಕಳು ಇರುತ್ತೆವೆ. ನನ್ನ ತಂದೆ ತಾಯಿ ಜೀವಂತ ಇರುವುದಿಲ್ಲ. ಈ ದಾವೆ ಹಾಕುವ ಕಾಲಕ್ಕೆ ನನ್ನ ತಂದೆ ಜೀವಂತ ಇರಲಿಲ್ಲ. 3 ನೇ ವಾದಿ ನನ್ನ ಸಹೋದರಿ ಇದ್ದು ಅವರು ಚಿಕ್ಕಮಂಗಳೂರಿನಲ್ಲಿ ಸುಮಾರು 20 ವರ್ಷಗಳಿಂದ ವಾಸವಿರುತ್ತಾರೆ. 3 ನೇ ವಾದಿಯ ವಿಳಾಸವನ್ನು ದಾವೆಯಲ್ಲಿ ನಮೂದು ಮಾಡಿರುವುದಿಲ್ಲ. ಈ ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿ ಸ.ನಂ.136/2 ಆಗಿರುತ್ತದೆ. ಅದು 4 ಎಕರೆ 31 ಗುಂಟೆ ಪಹಣಿ ಪ್ರಕಾರ ಇರುತ್ತದೆ. ಸದರಿ ಜಮೀನಿನಲ್ಲಿ ಯಾರು ಯಾರಿಗೆ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ ನನಗೆ 9 ವರೆ ಗುಂಟೆ ಇರುತ್ತದೆ. ಪ್ರತಿವಾದಿಗೆ ಸದರಿ ಸ.ನಂ.ನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನನಗೆ ಜಮೀನು ಕೋರ್ಟ್ ಡಿಕ್ರಿ ಮೂಲಕ ಬಂದಿರುತ್ತದೆ. ಸದರಿ ಡಿಕ್ರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. ನಿ.ಪಿ.-1 ರ ಸಮಯದಲ್ಲಿ ನಾನು ಮತ್ತು ನನ್ನ ಸಹೋದರರು ಹಾಜರಿದ್ದರು. ಪ್ರತಿವಾದಿ ಸಹ ಹಾಜರಿದ್ದರು. ನಿ.ಪಿ.-1 ಕ್ಕೆ ನಾನು ಸಹಿ ಮಾಡಿರುವುದಿಲ್ಲ. ಆದರೆ ನನ್ನ ತಂದೆ ಮಾಡಿರುತ್ತಾರೆ. ಸಾಕ್ಷಿದಾರರಾಗಿ ಸುಭಾಶ ಎಂಬುವರು ಸಹಿ ಮಾಡಿರುತ್ತಾರೆ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು. ಪ್ರತಿವಾದಿ 2 3/4 ಗುಂಟೆ ಗೆ ಸಂಬಂಧಪಟ್ಟಂತೆ ನಿಪಿ 1 ನ್ನು ಮಾಡಿಕೊಂಡಿರುತ್ತಾರೆ. ನಿ.ಪಿ.-1 ರ ಸಮಯದಲ್ಲಿ ಪಹಣಿಯನ್ನು ಪರೀಶಿಲಿಸಿರುತ್ತೇವೆ. ಬೇರೆ ದಾಖಲಾತಿಗಳನ್ನು ಪರೀಶಿಲನೆ ಮಾಡಿರುವುದಿಲ್ಲ.

**3.** ದಾವಾ ಆಸ್ತಿಯಲ್ಲಿ ನಾವೇ ನಮ್ಮ ಅಜ್ಜನ ಕಾಲದಿಂದಲೂ ಸ್ವಾಧೀನದಲ್ಲಿರುತ್ತೇವೆ. ನಿ.ಪಿ.-1 ರಲ್ಲಿ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ಬರೆದಿರುತ್ತೇವೆ. ನಿ.ಪಿ.-1 ನ್ನು ಎರಡು ಲಕ್ಷದ ಐವತ್ತು ಸಾವಿರ ರೂ. ಕ್ಕೆ ಕರಾರು ಮಾಡಿಕೊಂಡಿರುತ್ತೇವೆ. ಸ್ಟಾಂಪ್ ಪೇಪರ್ ನ್ನು ಪ್ರತಿವಾದಿ ರವರ ಕಡೆಯಿಂದ ವಕೀಲರ ಮೂಲಕ ತರಿಸಿಕೊಂಡಿರುತ್ತಾರೆ. ರೂ.100 ಸ್ಟಾಂಪ್ ಪೇಪರ್ ನ್ನು ತಂದಿರುತ್ತಾರೆ. ನಿ.ಪಿ.-1 ನೊಂದಾಯಿತ ದಾಖಲಾತಿ ಆಗಿರುವುದಿಲ್ಲ. ನಿ.ಪಿ.-1 ನ್ನು ಶ್ರೀ ಪಿತಾಂಬರಚಾರ್ ವಕೀಲರು ಬರೆದಿರುತ್ತಾರೆ. ಎಲ್ಲಾ ಅಂಶಗಳನ್ನು ಅವರು ಬರೆದಿರುವುದಿಲ್ಲ. ಕೆಲವು ಅಂಶಗಳನ್ನು ನನ್ನ ಸಹೋದರ 1 ನೇ ವಾದಿ ಬರೆದಿರುತ್ತಾರೆ. 1 ನೇ ವಾದಿ ದೇವಾಲದಕೆರೆ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾರೆ. ಅವರು ಪದವಿಧರ ಆಗಿರುತ್ತಾರೆ.

**4.** ನಿ.ಪಿ.-1 ನ್ನು ದಿನಾಂಕ **08.06.2018** ರಂದು ಬರೆದಿರುತ್ತಾರೆ. ಅದನ್ನು ನಮ್ಮ ಊರಿನಲ್ಲಿ ಬರೆದಿರುತ್ತಾರೆ. ನಿ.ಪಿ.-1 ರಲ್ಲಿ ಮುಂಗಡ ಹಣ ಒಂದು ಲಕ್ಷ ಹಣವನ್ನು ಚೆಕ್ ಮೂಲಕ ನೀಡಿರುವುದಾಗಿ ಬರೆದು ಚೆಕ್ ನಂಬರನ್ನು ಸಹ ಸದರಿ ಶ್ರೀ ಪಿತಾಂಬರಚಾರ್ ವಕೀಲರು ಬರೆದಿರುತ್ತಾರೆ. 1 ನೇ ವಾದಿ ಕೆಲವು ಅಂಶಗಳನ್ನು ಬರೆಯುವಾಗ ಆ ಸಮಯದಲ್ಲಿ ನನ್ನ ತಂದೆ, ಸುಭಾಶ, 1 ನೇ ವಾದಿ ಮತ್ತು 3 ನೇ ವಾದಿ ಹಾಜರಿದ್ದರು. 1 ನೇ ವಾದಿ ಮಾಹಿತಿಯನ್ನು ಸೇರಿಸಿದ ಜಾಗದಲ್ಲಿ ಪ್ರತಿವಾದಿಯ ಸಹಿಯನ್ನು ಪಡೆದಿರುವುದಿಲ್ಲ. ಆದರೆ ಅವರು ಓದಿ ಸಹಿ ಮಾಡಿರುತ್ತಾರೆ. ನಿ.ಪಿ.-1 ರಲ್ಲಿ ಕರಾರು ಪತ್ರದ ದಿನಾಂಕವನ್ನು ನಮೂದು ಮಾಡಿರುತ್ತಾರೆ.

**5.** ನಿ.ಪಿ.-1 ಕ್ಕೆ ನಾವು ನಮ್ಮ ಮನೆಯಲ್ಲಿ ಸಹಿ ಮಾಡಿರುತ್ತೇವೆ. ಪ್ರತಿವಾದಿ ಅವರ ಮನೆಯಲ್ಲಿ ಸಹಿ ಮಾಡಿರುತ್ತಾರೆ. ದಾವಾ ಆಸ್ತಿಯಲ್ಲಿ ನಾವೇ ಸ್ವಾಧೀನದಲ್ಲಿರುವ ಬಗ್ಗೆ

ಕೋರ್ಟ್ ಡಿಕ್ರಿಯನ್ನು ಮತ್ತು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು 9 ವರೆ ಗುಂಟೆ ಆಸ್ತಿಯ ಸ್ವಾಧೀನ ಇರುವ ಬಗ್ಗೆ ದಾಖಲಾತಿ ನೀಡಿರುತ್ತೇವೆ. ಆದರೆ ದಾವಾ ಆಸ್ತಿಯಲ್ಲಿ ದಾವಾ ಆಸ್ತಿಯ ಸ್ವಾಧೀನ ಬಗ್ಗೆ ದಾಖಲಾತಿ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಕೋರ್ಟ್ ಡಿಕ್ರಿಯಲ್ಲಿ ನಮಗೆ ಬಂದಿರುವುದಿಲ್ಲ. ನನ್ನ ತಂದೆ ದಿನಾಂಕ 07.01.2020 ರಲ್ಲಿ ಮರಣ ಹೊಂದಿರುತ್ತಾರೆ. ನಿ.ಪಿ.-1 ರಲ್ಲಿ 1 ನೇ ಪಕ್ಷಗಾರರು ನಮ್ಮ ತಂದೆ ಮತ್ತು 2 ನೇ ಪಕ್ಷಗಾರರು ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ನಿ.ಪಿ.-1 ರ 3 ನೇ ಪುಟದಲ್ಲಿ ಈ ದಾವೆಯನ್ನು ಹೂಡುವ ಉದ್ದೇಶದಿಂದ ಆನಂತರದಲ್ಲಿ ತಿದ್ದುಪಡಿ ಮಾಡಿಕೊಂಡು ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ಓದಿದ ನಂತರ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ಓದಿದ ನಂತರ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ